# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಹರಾಜು ಮಾರಾಟ ಕ್ರಯಪತ್ರ

ಸನ್ __________ ಇಸವಿ ____________________________ ತಿಂಗಳ ____________________ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಾಟಗಾರರು (ಮಾರಾಟಗಾರ ಎಂದರೆ ಅಧಿಕಾರದಲ್ಲಿರುವ ಅವರ ಉತ್ತರಾಧಿಕಾರಿಗಳು ಎಂದರ್ಥ ಮತ್ತು ಅವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರರು (ಖರೀದಿದಾರ ಎಂದರೆ ಆತನ : ಆಕೆಯ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಮತ್ತು ಹಸ್ತಾಂತರಣಕಾರರು ಎಂದರ್ಥ ಮತ್ತು ಅವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ______________ ____________________________________ ಎಂಬಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ __________________________ ____________________ ಎಂಬುವವರ ಮಗನಾದ / ಮಗಳಾದ / ಹೆಂಡತಿಯಾದ ____________________ ವರ್ಷ ವಯಸ್ಸಿನ ಶ್ರೀ / ಶ್ರೀಮತಿ ________________________________________________________ ಎಂಬುವವರಿಗೆ ಬೆಂಗಳೂರಿನಲ್ಲಿ ಬರೆದುಕೊಟ್ಟ ಕ್ರಯಪತ್ರದ ಕ್ರಮವೇನೆಂದರೆ:-

________________________________ ರಂದು ಮಾರಾಟಗಾರರು ನಡೆಸಿದ ಹರಾಜಿನಲ್ಲಿ ಖರೀದಿದಾರರು ಷೆಡ್ಯೂಲ್ ಸ್ವತ್ತನ್ನು ____________________________________ ರೂಪಾಯಿಗಳಿಗೆ (_______________________________ ____________________________________________ ರೂಪಾಯಿಗಳು) ಖರೀದಿಸಿದ್ದು ಖರೀದಿ ಹಣವನ್ನು ಪೂರ್ಣವಾಗಿ ಸಂದಾಯ ಮಾಡಿರುತ್ತಾರೆ. ಮಾರಾಟಗಾರರು ಹಣ ಪಡೆದ ಬಗ್ಗೆ ಸ್ವೀಕೃತಿ ನೀಡಿದ್ದು ಸದರಿ ಹರಾಜು ಮಾರಾಟವನ್ನು ಸ್ಥಿರೀಕರಿಸಿರುತ್ತಾರೆ.

ಮಾರಾಟಗಾರರು ಷೆಡ್ಯೂಲ್ ಸ್ವತ್ತಿನ ಪರಿಪೂರ್ಣ ಸ್ವಾಧೀನತೆಯನ್ನು ಹೊಂದಿದ್ದಾರೆ ಅಥವಾ ಸದರಿ ಸ್ವತ್ತಿನಲ್ಲಿ ತಾವು ಹೊಂದಿರುವ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿಗೆ ಪರಿಪೂರ್ಣ ಹಕ್ಕುಳ್ಳವರಾಗಿದ್ದಾರೆ.

ಮಾರಾಟಗಾರರು ಸದರಿ ಸ್ವತ್ತಿನ ಮಾರಾಟ ಬೆಲೆಯಾದ ______________________________ ರೂಪಾಯಿಗಳನ್ನು ಖರೀದಿದಾರರಿಂದ ಪಡೆದುಕೊಂಡು, ಇದರಡಿಯಲ್ಲಿ ಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಇಡೀ ಸ್ವತ್ತನ್ನು ಅದರ ಪರಿಪೂರ್ಣ ಮಾಲೀಕರಾಗಿ ಖರೀದಿದಾರರಿಗೇ ಈ ಮೂಲಕ ವಹಿಸಿಕೊಟ್ಟಿರುತ್ತಾರೆ. ಇನ್ನು ಮುಂದೆ ಖರೀದಿದಾರರು ಸದರಿ ಷೆಡ್ಯೂಲ್ ಸ್ವತ್ತನ್ನು ತಮ್ಮ ಸ್ವಾಧೀನದಲ್ಲಿ ಹೊಂದಿ, ಅದನ್ನು ತಮ್ಮ ಸ್ವಂತ ಮತ್ತು ಸಂಪೂರ್ಣ ಸ್ವತ್ತು ಎಂಬಂತೆ ಶಾಶ್ವತವಾಗಿ ಸುಖಸಂತೋಷದಿಂದ ಅನುಭವಿಸಿಕೊಂಡು ಬರತಕ್ಕದ್ದು. ಸದರಿ ಸ್ವತ್ತು ಎಲ್ಲಾ ಋಣಭಾರಗಳಿಂದ ಮುಕ್ತವಾದ, ಅತಿಕ್ರಮಣಕಾರರನ್ನು ಕಾನೂನು ಬದ್ಧವಾಗಿ ಹೊರಹಾಕಿ ತೆರವುಗೊಳಿಸಿರುವ ನಿರುಪಾದಿತವಾದ ಸ್ವತ್ತಾಗಿದೆ. ಸದರಿ ಸ್ವತ್ತಿನ ಮೇಲೆ ಯಾವುದೇ ತೆರಿಗೆಗಳು ಬಾಕಿ ಇಲ್ಲ, ಯಾವುದೇ ರೀತಿಯ ಇತರ ಬಾಕಿಗಳು ಮತ್ತು ಕ್ಲೇಮುಗಳೂ ಇಲ್ಲ. ಸದರಿ ಸ್ವತ್ತಿನ ಮೇಲೆ ಸದರಿ ಮಾರಾಟಗಾರರು ಹೊಂದಿರುವ ಎಲ್ಲಾ ಹಕ್ಕುಗಳನ್ನು ವಿಶೇಷ ಹಕ್ಕುಗಳನ್ನು ಅನುಭೋಗದ ಹಕ್ಕುಗಳನ್ನು ಮತ್ತು ಉಪ ಹಕ್ಕುಗಳನ್ನು ಅಥವಾ ಯಾವುದೇ ರೀತಿಯಲ್ಲಿ ಅವರು ಹೊಂದಿರುವ ಒಡೆತನದ ಸವಲತ್ತುಗಳನ್ನು ಮತ್ತು ಸಂಪತ್ತು, ಅಧಿಕಾರ, ಹಕ್ಕುನಾಮೆ, ಹಿತಾಸಕ್ತಿ, ಕ್ಲೇಮು ಮತ್ತು ತಗಾದೆಯನ್ನು ಈ ಮೂಲಕ ಖರೀದಿದಾರರಿಗೆ ಸಂಪೂರ್ಣವಾಗಿ ವರ್ಗಾಯಿಸಿರುತ್ತಾರೆ ಮತ್ತು ಖರೀದಿದಾರರನ್ನು ಸ್ವತ್ತಿನ ವಾಸ್ತವಿಕ ಸ್ವಾಧೀನತೆಯಲ್ಲಿ ಇರಿಸಿದ್ದಾರೆ.

ಅಲ್ಲದೆ ಮುಂದೆ ಯಾವುದೇ ತಂಟೆತಕರಾರುಗಳು ಬಂದಲ್ಲಿ ಅವುಗಳನ್ನು ಬಗೆಹರಿಸಿಕೊಟ್ಟು ಮಾರಾಟವನ್ನು ಸ್ಥಿರಪಡಿಸುವುದಾಗಿ ಮತ್ತು ಸದರಿ ಒಡಂಬಡಿಕೆಗಳನ್ನು ಅಥವಾ ಅವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ ಕಾರಣದಿಂದಾಗಿ ಉದ್ಭವಿಸುವ ಎಲ್ಲಾ ಕ್ರಮಗಳು, ದಾವೆಗಳು, ಕ್ಲೇಮುಗಳು, ತಗಾದೆಗಳು, ಉಂಟಾಗುವ ನಷ್ಟಗಳು ಮತ್ತು ಹಾನಿಗಳ ಸಂಬಂಧದಲ್ಲಿ ಖರೀದಿದಾರರಿಗೆ ನಷ್ಟ ಭರ್ತಿ ಮಾಡಿಕೊಡುವುದಾಗಿ ಮಾರಾಟಗಾರರು ವಾಗ್ದಾನ ಮಾಡುತ್ತಾರೆ.

## ಷೆಡ್ಯೂಲ್

________________ ಬಡಾವಣೆಯ ____________ ವಿಭಾಗದಲ್ಲಿರುವ ____________ ಸಂಖ್ಯೆಯ ನಿವೇಶನದ ಚಕ್ಕುಬಂದಿ :

ಪೂರ್ವಕ್ಕೆ : ________________

ಪಶ್ಚಿಮಕ್ಕೆ : ________________

ಉತ್ತರಕ್ಕೆ : ________________

ದಕ್ಷಿಣಕ್ಕೆ : ________________

ಈ ಮಧ್ಯೆ ಇರುವ ಪೂರ್ವಪಶ್ಚಿಮ : ________________ ಚ.ಅ./ಚ.ಮೀ

ಉತ್ತರ ದಕ್ಷಿಣ : ________________ ಚ.ಅ./ಚ.ಮೀ

ಅಳತೆಯ ಒಟ್ಟು ವಿಸ್ತೀರ್ಣ : ______________ ಚ.ಅ./ಚ.ಮೀಗಳುಳ್ಳ ನಿವೇಶನವು ಈ ಕ್ರಯಪತ್ರಕ್ಕೆ ಒಳಪಟ್ಟಿದೆ.

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಮೇಲೆ ತಿಳಿಸಿದ ದಿನಾಂಕ ತಿಂಗಳು, ಮತ್ತು ವರ್ಷದಂದು ಬೆಂಗಳೂರಿನಲ್ಲಿ ತಮ್ಮ ಸಹಿ ಮತ್ತು ಮೊಹರು ಹಾಕಿರುತ್ತಾರೆ.

ಮಾರಾಟಗಾರ

ಸಾಕ್ಷಿಗಳು

1.

2.

ಉಪಕಾರ್ಯದರ್ಶಿ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,**

ಬೆಂಗಳೂರು.